ಶ್ರೀ ವಿ. ಶ್ರೀನಿವಾಸ ಪ್ರಸಾದ್:– ಅದಕ್ಕೆ ನಾವೂ ಕೂಡ ಕಾನೂನಿನ ಪ್ರಕಾರ ಹೋಗಬೇಕಾಗುತ್ತದೆ. respect ಕೊಡಬೇಕಾಗುತ್ತದೆ.

ಅಧ್ಯಕ್ಷರು:– ಅವಕಾಶ ಕೊಡಿ.

ಶ್ರೀ ವಿ. ಶ್ರೀನಿವಾಸ ಪ್ರಸಾದ್:– ಬಹಳ ಸ್ಪಷ್ಟವಾಗಿ ತಮಗೆ ಹೇಳುತ್ತಿದ್ದೇವೆ. ಯಾವ ರೀತಿಯಲ್ಲಿ ಅದು ಬಗರ್‌ಹುಕುಂ ಸಾಗುವಳಿಯಲ್ಲಿ reject ಆಗಿದೆ, ಯಾವ ಉದ್ದೇಶಕ್ಕೆ ಆಯಿತು, ಸುಪ್ರೀಂಕೋರ್ಟ್...

ಶ್ರೀ ಗೋವಿಂದ ಎಂ. ಕಾರಜೋಳ:– ಸರ್ ಅದುವರೆವಿಗೂ ಅವರಿಗೆ vacate ಮಾಡಬಾರದು ಎಂದು ಒಂದು direction ಕೊಡಿ.

ಅಧ್ಯಕ್ಷರು:– ಆಯಿತು.

(ಗೊಂದಲ)

ಶ್ರೀ ಕೆ.ಜಿ. ಬೋಪಯ್ಯ:– ಒಂದು ಸಲ ಪ್ರಯತ್ನ. . .

(ಗೊಂದಲ)

ಶ್ರೀ ಗೋವಿಂದ ಎಂ. ಕಾರಜೋಳ:– ಅವರನ್ನು ಹೊರಗೆ ಹಾಕಬಾರದು ಎಂದು ಒಂದು direction ಕೊಡಿ. ಎರಡು ಎಕರೆ 20 ಗುಂಟೆಯಿದೆ.

ಶ್ರೀ ವಿ. ಶ್ರೀನಿವಾಸ ಪ್ರಸಾದ್:– ಸ್ಪಷ್ಟವಾಗಿದೆ. ಮೂರು ಎಕರೆ ಒಳಗೆ ಇರುವಂತಹವರಿಗೆ ಯಾರಿಗೂ ಹೊರಗೆ ಹಾಕಬೇಡಿ ಎಂದು ಅಲ್ಲಿಯೇ ಇಡುವುದಕ್ಕೆ ಹೇಳುತ್ತೇವೆ. ಅಲ್ಲಿಯೇ ಮಾಡಿಸೋಣ. ಸಭಾಧ್ಯಕ್ಷರು ಹೇಳಿದ್ದಾರೆ. ಮಾಡೋಣ.

ಅಧ್ಯಕ್ಷರು:– ಸರಿಯಾಗಿ advice ಮಾಡಿ.

5) ವಿಷಯ: 250 ಎಕರೆ ಪ್ರದೇಶವನ್ನು "S.E.Z" "ಕೈಗಾರಿಕಾ ವಸಾಹತು"ವನ್ನಾಗಿ ಮೀಸಲಿರಿಸುವ ಬಗ್ಗೆ.

ಶ್ರೀ ಪ್ರಸನ್ನ ಕುಮಾರ್ ಕೆ.ಬಿ. (ಶಿವಮೊಗ್ಗ):– ಮಾನ್ಯ ಅಧ್ಯಕ್ಷರೆ, ಶಿವಮೊಗ್ಗ ತಾಲ್ಲೂಕಿನ ಸರ್ವೆ ನಂ.1ರಲ್ಲಿ 600 ಎಕರೆ ಪ್ರದೇಶದಲ್ಲಿ ಉಳಿದಿರುವ 404 ಎಕರೆ ಖಾಲಿ ಪ್ರದೇಶದಲ್ಲಿ ಕೈಗಾರಿಕೋದ್ಯಮಿಗಳಿಗೆ ಅನುಕೂಲವಾಗುವಂತೆ 250 ಎಕರೆ ಪ್ರದೇಶವನ್ನು "S.E.Z" "ಕೈಗಾರಿಕಾ ವಸಾಹತು"ವನ್ನಾಗಿ ಮೀಸಲಿರಿಸುವ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರ ಗಮನ ಸೆಳೆಯುತ್ತೇನೆ.

ಶ್ರೀ ವಿ. ಶ್ರೀನಿವಾಸ ಪ್ರಸಾದ್ (ಕಂದಾಯ ಸಚಿವರು) (ಮಾನ್ಯ ಮುಖ್ಯಮಂತ್ರಿಯವರ ಪರವಾಗಿ):– ಮಾನ್ಯ ಅಧ್ಯಕ್ಷರೆ,

ಶಿವಮೊಗ್ಗ ತಾಲ್ಲೂಕು, ಸರ್ವೆ ನಂ.1 ರಲ್ಲಿ ಕೆ.ಐ.ಎ.ಡಿ.ಬಿ. ವತಿಯಿಂದ ಯಾವುದೇ ಜಮೀನನ್ನು ಸ್ವಾಧೀನಪಡಿಸಿಕೊಂಡಿರುವುದಿಲ್ಲ.

ಆದರೆ, ಶಿವಮೊಗ್ಗ ತಾಲ್ಲೂಕು, ನಿಧಿಗೆ ಹೋಬಳಿ, ಸೋಗಾನೆ ಗ್ರಾಮದ ಸರ್ವೆ ನಂ. 120/ಪಿ ರಲ್ಲಿ 21–20 ಎಕರೆ ಹಿಡುವಳಿ ಮತ್ತು 582–20 ಎಕರೆ ಸರ್ಕಾರಿ ಜಮೀನು ಸೇರಿದಂತೆ ಒಟ್ಟು 604–00 ಎಕರೆಗೆ ಕೆ.ಐ.ಎ.ಡಿ. ಕಾಯ್ದೆ ಕಲಂ 28(4) ರಡಿ ದಿನಾಂಕ 28.10.2010 ರಂದು ಅಂತಿಮ ಅಧಿಸೂಚನೆ ಹೊರಡಿಸಿ ಸ್ವಾಧೀನಪಡಿಸಿಕೊಳ್ಳಲಾಗಿದೆ.

ಹಿಡುವಳಿ ಜಮೀನಿಗೆ ಎಕರೆಯೊಂದಕ್ಕೆ ₹ 20.00 ಲಕ್ಷದಂತೆ ಪರಿಹಾರ ನಿಗದಿಪಡಿಸಿದ್ದು ಪಾವತಿ ಕಾರ್ಯ ಪ್ರಗತಿಯಲ್ಲಿದೆ. ಉಳಿಕೆ 582–20 ಎಕರೆ ಸರ್ಕಾರಿ ಜಮೀನನ್ನು ಮಂಡಳಿಗೆ ಹಸ್ತಾಂತರಿಸುವ ಕುರಿತು ಕಂದಾಯ ಇಲಾಖೆಯು ಕ್ರಮ ವಹಿಸುತ್ತಿದೆ.

ಸದರಿ 604–00 ಎಕರೆ ವಿಸ್ತೀರ್ಣದಲ್ಲಿ ಕೈಗಾರಿಕಾ ಪ್ರದೇಶ ಅಭಿವೃದ್ಧಿಪಡಿಸಲು ಪರಿಸರ ಇಲಾಖೆಯ ಅನುಮೋದನೆಗಾಗಿ ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗಿರುತ್ತದೆ.

ಈ ಪ್ರದೇಶದಲ್ಲಿ ಎಸ್.ಇ.ಝಡ್. ನಿರ್ಮಾಣ ಮಾಡುವ ಪ್ರಸ್ತಾವನೆಯು ಸಧ್ಯಕ್ಕೆ ಸರ್ಕಾರದ ಮುಂದಿರುವುದಿಲ್ಲ.

ಶ್ರೀ ಪ್ರಸನ್ನ ಕುಮಾರ್ ಕೆ.ಬಿ. (ಶಿವಮೊಗ್ಗ):– ಮಾನ್ಯ ಅಧ್ಯಕ್ಷರೆ, ಶಿವಮೊಗ್ಗ ನಗರದಲ್ಲಿ ಇವತ್ತಿನ ದಿವಸ ಯುವಕ–ಯುವತಿಯರು ಉದ್ಯೋಗಕ್ಕೆ ಅವಕಾಶವಿಲ್ಲದೇ ದೂರದ ಊರುಗಳಿಗೆ ಹೋಗುವಂತಹ ಪರಿಸ್ಥಿತಿ ಬರುತ್ತಿದೆ. ಅದಕ್ಕೋಸ್ಕರ ಕೈಗಾರಿಕೆಗೆ ಹೆಚ್ಚು ಒತ್ತು ಕೊಟ್ಟು, 250 ಎಕರೆ ಭಾಗವನ್ನು S.E.Z ಮಾಡಬೇಕೆಂದು ಮಾನ್ಯ ಮುಖ್ಯಮಂತ್ರಿಗಳ ಗಮನ ಸೆಳೆದಿದ್ದೆ. ಈಗಾಗಲೇ ಉತ್ತರವನ್ನು ಕೊಟ್ಟಿದ್ದಾರೆ. ಉತ್ತರದಲ್ಲಿ ಈ ಪ್ರದೇಶದಲ್ಲಿ S.E.Z ನಿರ್ಮಾಣ ಮಾಡುವ ಪ್ರಸ್ತಾವನೆ ಸಧ್ಯಕ್ಕೆ ಸರ್ಕಾರದ ಮುಂದೆ ಇರುವುದಿಲ್ಲವೆಂದು ಹೇಳಿದ್ದಾರೆ. ದಯಮಾಡಿ ನಾನು ನಿಮ್ಮ ಮೂಲಕ ಒತ್ತಾಯ ಮಾಡುತ್ತೇನೆ. ಈ ಪ್ರಸ್ತಾವನೆಯನ್ನು ಅವರು ಸರ್ಕಾರದ ಮುಂದೆ ತರಬೇಕು. ಅದನ್ನು ಮಾಡಿಕೊಡಬೇಕು ಎಂದು ನಾನು ತಮ್ಮ ಮೂಲಕ ಗಮನ ಸೆಳೆಯುತ್ತೇನೆ.

ಅಧ್ಯಕ್ಷರು:– ಅವರೇ ಸರ್ಕಾರ. S.E.Z ಮಾಡಬೇಕೆಂದು ಕೇಳುತ್ತಾರೆ. ಉತ್ತರ ಬಂದಿದೆ. ಇನ್ನೊಂದು ಸಲ S.E.Z ಆಗಿ ಘೋಷಣೆ ಮಾಡಿ ಎಂದು ಮತ್ತೊಂದು ಸಲ ಕೇಳುತ್ತಾರೆ.

ಶ್ರೀ ವಿ. ಶ್ರೀನಿವಾಸ ಪ್ರಸಾದ್ (ಕಂದಾಯ ಸಚಿವರು) (ಮಾನ್ಯ ಮುಖ್ಯಮಂತ್ರಿಯವರ ಪರವಾಗಿ):– ಇದು ಪ್ರಸನ್ನ ಕುಮಾರ್‌ರವರದು. ಆಯಿತು. ಮಾನ್ಯ ಮುಖ್ಯಮಂತ್ರಿಗಳ ಜೊತೆಗೆ ಚರ್ಚಿಸಿ... ಉತ್ತರದಲ್ಲಿ ಬಹಳ ಸ್ಪಷ್ಟವಾಗಿದೆ. ಇದನ್ನು ಈಗ ಕೊಟ್ಟಿದ್ದಾರೆ.

ಅಧ್ಯಕ್ಷರು:– ಆಯಿತು.

6) ವಿಷಯ: ನಕಾಶೆಯಲ್ಲಿ ಸುಮಾರು 33 ಸಾವಿರ ಎಕರೆ ಫಲವತ್ತಾದ ನೀರಾವರಿ ಭೂಮಿಯನ್ನು ಖರಾಬು ಭೂಮಿ ಎಂದು ನಮೂದಿಸಿರುವುದರ ಬಗ್ಗೆ.